## ಕೂರು ತೊಟ್ಟಿಲು



ಹಿಂದೆ ತಾಯಂದಿರು ಹಸುಗೂಸುಗಳನ್ನು ಮಲಗಿಸಲು ಅವರವರ ಶಕ್ತ್ಯಾನುಸಾರ ಕಾಗಡಿ ಅಥವಾ ತೊಟ್ಟಿಲುಗಳನ್ನು ಉಪಯೋಗಿಸುತ್ತಿದ್ದರು. ಸ್ವಲ್ಪ ಬೆಳೆದ ಮಕ್ಕಳನ್ನು ಆಕಡೆ ಈಕಡೆಗೆ ಒಂದೊಂದು ಕಾಲು ಹಾಕಿ ಕೂರಿಸಿ ತೂಗಲು ಕೂರು ತೊಟ್ಟಿಲುಗಳು ಬಳಕೆಯಲ್ಲಿದ್ದವು. ಒಂದು ಭಾಗದಲ್ಲಿ ಮಾತ್ರ ಮಗುವಿನ ಕಾಲುಗಳನ್ನು ಇಳಿಬಿಡಲು ಅವಕಾಶವಿರುವ ಈ ಆಕರ್ಷಕ ಕಾಗಡಿಯಲ್ಲಿ ಇನ್ನುಳಿದ ಮೂರೂ ಭಾಗಗಳೂ ಬಂದಾಗಿ ಮುಚ್ಚಲ್ಪಟ್ಟಿವೆ. ಮಕ್ಕಳು ಹಾಗೂ ತಾಯಂದಿರಿಗೆ ಮುದ ನೀಡುತ್ತಿದ್ದ ಈ ಮಾದರಿಯ ಮರದ ಕಾಗಡಿಗಳು ಈಗ ಮರೆಯಾಗಿ ಇದೇ ಮಾದರಿಯ ಪ್ಲಾಸ್ಟಿಕ್ ತೊಟ್ಟಿಲುಗಳು ಮಾರುಕಟ್ಟೆಗೆ ಬರತೊಡಗಿವೆ.

**- ಮ.ಗು.ಬಸವಣ್ಣ, ನಂಜನಗೂಡು**

## ತೆಂಗಿನ ಮಡಲಿನ ಸಿಂಗಾರ



ಪ್ಲಾಸ್ಟಿಕ್ ಸರ್ವಾಂತರ್ಯಾಮಿಯಾಗಿರುವ ಈ ಸಮಯದಲ್ಲಿ ಚಿತ್ರದಲ್ಲಿ ಕಾಣುವ ಅತ್ಯಾಕರ್ಷಕ ಅಲಂಕಾರವನ್ನು ಮಾಡಿರುವುದು ಯಾವುದರಿಂದ ಗೊತ್ತೇ? ಇದನ್ನು ರಚಿಸಿರುವುದು ತೆಂಗಿನ ಮಡಲುಗಳಿಂದ! ಹತ್ತಿರದಿಂದ ಸೂಕ್ಷ್ಮವಾಗಿ ಗಮನಿಸಿದರಷ್ಟೇ ಇದನ್ನು ತೆಂಗಿನ ಮಡಲಿನಿಂದ (ದಕ್ಷಿಣ ಕನ್ನಡದಲ್ಲಿ ತೆಂಗಿನ ಮಡಲನ್ನು ಕೊತ್ತಾಳ್ಗೆ ಎನ್ನುತ್ತಾರೆ) ಮಾಡಿದ್ದಾರೆಂಬುದು ತಿಳಿಯುತ್ತದೆ. ಮೂರ್ನಾಲ್ಕು ಅಡಿಗಳಷ್ಟು ಉದ್ದ ತೆಂಗಿನ ಮಡಲಿನ ಬುಡವನ್ನು ಕತ್ತರಿಸಿಕೊಂಡು ಅದಕ್ಕೆ ಬಣ್ಣಗಳನ್ನು ಬಳಿದ ಮನಮೋಹಕ ಸ್ವಾಗತ ಕಮಾನಿನ ರಚನೆಯಿರುವುದು ಧರ್ಮಸ್ಥಳದಿಂದ ಸುಬ್ರಹ್ಮಣ್ಯ ಮಾರ್ಗದಲ್ಲಿ ಎರಡು ಕಿಲೋಮೀಟರ್ ದೂರದಲ್ಲಿರುವ ಪುದುವೆಟ್ಟು ಹಳ್ಳಿಗೆ ಸಂಪರ್ಕಿಸುವ ಕವಲು ದಾರಿಯಲ್ಲಿ. ಅಲ್ಲಿನ ವನದುರ್ಗಾ ಪರಮೇಶ್ವರೀ ದೇವಸ್ಥಾನದ ಬ್ರಹ್ಮ ಕಲಶಕ್ಕೆ ಸ್ವಾಗತವನ್ನು ಕೋರುತ್ತಿರುವ ಈ ಅತ್ಯಾಕರ್ಷಕ ಕಮಾನು ನೋಡುಗರ ಕಣ್ಮನ ಸೆಳೆಯುತ್ತಿದೆ.

**- ಡಾ. ಮನೋಜ ಗೋಡಬೋಲೆ, ಉಜಿರೆ**

## ಅಂಗವೈಕಲ್ಯ ಮೆಟ್ಟಿನಿಂತ ವೈದ್ಯೆ

ಈಕೆ ವಿಜಯಪುರ ತಾಲೂಕಿನ ಶಿವಣಗಿ ಗ್ರಾಮದ ಸಾಹೇಬ ಪಟೇಲ ಮದರಕರ ಹಾಗೂ ಶಾಹಪುರಿ ಬೇಗಂ ದಂಪತಿಯ ಪುತ್ರಿ ಡಾ.ಮೆಹಜಬೀನ್. ತಮ್ಮ ಮೂರನೇ ವಯಸ್ಸಿಗೆ ಕಾಲನ್ನು ಕಳೆದುಕೊಂಡರು. ಹತ್ತನೇ ತರಗತಿ ಮುಗಿಯುವವರೆಗೆ ಶಾಲೆಗೆ ಹೋಗದೇ ಮನೆಯಲ್ಲೇ ಕುಳಿತು ಕಲಿತರು. ಎಂ.ಬಿ.ಬಿ.ಎಸ್ ಪದವಿ ಮುಗಿಸಿ ಮುಂದೆ ಎಂಡಿ ಪದವಿಯನ್ನು ಚಿನ್ನದ ಪದಕದೊಂದಿಗೆ ತಮ್ಮದಾಗಿಸಿಕೊಂಡರು. ಈಗ ಬಾಗಲಕೋಟೆಯ ಪ್ರತಿಷ್ಠಿತ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಚರ್ಮರೋಗ ವಿಭಾಗದ ಸಹಾಯಕ ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ರಾಜ್ಯ ಸರ್ಕಾರ ವಿಶ್ವ ಅಂಗವಿಕಲರ ದಿನಾಚರಣೆ ಅಂಗವಾಗಿ ನೀಡುವ ರಾಜ್ಯ ಪ್ರಶಸ್ತಿ, ಆರೂಢ ಸಂಸ್ಕರಣಾ ವೇದಿಕೆ ನೀಡುವ ಆರೂಢಶ್ರೀ ಪ್ರಶಸ್ತಿ, ಶಿಕ್ಷಣ ಸಿರಿ, ಬ್ಯಾರಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾರೆ. ವ್ಹೀಲ್ ಚೇರ್‌ನಲ್ಲಿ ಚಲಿಸುವ ಇವರು ಮುಂದೆ ಇಡೀ ಭಾರತವನ್ನು ಸುತ್ತಿ ಮಾರಣಾಂತಿಕ ಕಾಯಿಲೆಗಳಿಂದ ನರಳುತ್ತಿರುವವರಿಗೆ ಸಂಜೀವಿನಿಯಾಗಬೇಕೆಂಬ ಹಂಬಲದಲ್ಲಿದ್ದಾರೆ.

**- ಗುರುರಾಜ ಬ.ಕನ್ನೂರ, ವಿಜಯಪುರ**

